# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ-1168/2015/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:14.2.2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಶ್ರೀ.ರಮೇಶ್ ಬಿನ್ ಲೇಟ್ ತಿಮ್ಮಾಬೋವಿ, ಪಾದರಹಳ್ಳಿ ಗ್ರಾಮ ಹರೀಸಂದ್ರ ಅಂಚೆ, ಕಸಬಾ ಹೋಬಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ ಅವರು ಸಲ್ಲಿಸಿದ ದೂರಿನ ಕುರಿತು.

****

ಶ್ರೀ.ರಮೇಶ್ ಬಿನ್ ಲೇಟ್ ತಿಮ್ಮಾಬೋವಿ, ಪಾದರಹಳ್ಳಿ ಗ್ರಾಮ ಹರೀಸಂದ್ರ ಅಂಚೆ, ಕಸಬಾ ಹೋಬಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ), ಇವರು ಶ್ರೀ.ವೆಂಕಟೇಶ್, ಪಂಚಾಯ್ತಿ, ಅಭಿವೃದ್ಧಿ ಅಧಿಕಾರಿಗಳು, ಹರೀಸಂದ್ರ ಗ್ರಾಮ ಪಂಚಾಯ್ತಿ, ಕಸಬಾ ಹೋಬಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.9ರಡಿಯಲ್ಲಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. ದೂರುದಾರರು ತಮ್ಮ ದೂರಿನಲ್ಲಿ, ಶ್ರೀ.ರಮೇಶ್ ಬಾದರಹಳ್ಳಿ ಕಸಬಾ ಹೋಬಳಿ ರಾಮನಗರ ನಿವಾಸಿ ಇವರು ವೆಂಕಟೇಶ್ ಪಿ.ಡಿ.ಓ., ಹರಿಸಂದ್ರ ಗ್ರಾಮ ಪಂಚಾಯ್ತಿ ಇವರ ವಿರುದ್ಧ ಸಲ್ಲಿಸಿದ್ದಾರೆ. ತನಗೆ ಸಂಬಂಧಿಸಿರುವ ಖಾನೇಷು ಮಾರಿ ನಂ: 804ಕ್ಕೆ ಹೊಂದಿಕೊಂಡು ಮನೆಯ ಹಿಂಭಾಗದಲ್ಲಿ ಅನಧಿಕೃತವಾಗಿ ಖಾಸಗಿ ವ್ಯಕ್ತಿಗಳು ತಿಪ್ಪೆ ಹಾಕಿ ಕಳಿ ಬೇಲಿಯನ್ನು ಬೆಳಸಿ ವಾತಾವರಣವನ್ನು ಹಾಳು ಮಾಡುತ್ತಿದ್ದಾರೆ ಇದರಿಂದ ರೋಗಗಳು ಹರಡುತ್ತಿದೆ ವಿಷ ಪೂರಿತ ಹಾವು ಹೆಗ್ಗಣಗಳು ಮನೆಗೆ ಬರುತ್ತಿದೆ. ಆದ್ದರಿಂದ ಎದುರುದಾರರಿಗೆ ದೂರು ಕೊಟ್ಟಾಗಲು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯವರು ಪಿ.ಡಿ.ಓ ರವರಿಗೆ ಪತ್ರ ಬರೆದು ಪಾದರಹಳ್ಳಿ

ನಿವಾಸಿಗಳು ದೂರುದಾರರ ಮನೆಯ ಅಕ್ಕಪಕ್ಕದಲ್ಲಿ ದನ ಕುರಿಗಳನ್ನು ಕಟ್ಟಿ ಕೊಟಿಗೆಗಳಿಂದ ಚರಂಡಿಗೆ ಕಲುಷಿತ ನೀರನ್ನು ಬಿಟ್ಟಿದ್ದಾರೆ ಅವರ ವಿರುದ್ಧ ಕ್ರಮ ಕೈಗೊಳ್ಳಲು ಕೋರಿದ್ದಾರೆ. ಆದರೆ ಅವರ ವಿರುದ್ಧ ಕ್ರಮ ಕೈಗೊಂಡಿಲ್ಲವೆಂದು ದೂರು ಸಲ್ಲಿಸಿದ್ದು ಇರುತ್ತದೆ.

3) ಈ ದೂರನ್ನು ತನಿಖೆಗೆ ತೆಗೆದುಕೊಂಡು ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿ: 16.1.2014ರಂದು ದೂರುದಾರರು ಅರ್ಜಿ ಸಲ್ಲಿಸಿದ್ದರು. ಈ ವಿಷಯದ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಆಜುಬಾಜುದಾರರಿಗೆ ತಿಳುವಳಿಕೆ ಪತ್ರ ನೀಡಲಾಗಿದೆ. ಗ್ರಾಮಸ್ಥರ ಸಮ್ಮುಖದಲ್ಲಿ ಮಹಜರ್ ಮಾಡಲಾಗಿದೆ. ಪುಟ್ಟ ಸ್ವಾಮಿ ಗೌಡ ಎನ್ನುವವರು ದೂರುದಾರರಾದ ರಮೇಶ್ ಇವರ ವಿರುದ್ಧವೂ ಸಹ ಅರ್ಜಿ ಸಲ್ಲಿಸಿರುತ್ತಾರೆ ಅಂತ ಹೇಳುತ್ತಾರೆ.

4) ಈ ಆಕ್ಷೇಪಣೆಗಳ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿ ಅವರು ದೂರಿನ ಅಂಶಗಳನ್ನೇ ಪುನರ್ ಉಚ್ಚರಿಸಿದ್ದಾರೆ. ಕೆಲವು ಭಾವ ಚಿತ್ರಗಳನ್ನು ಲಗತ್ತಿಸಿರುತ್ತಾರೆ.

5) ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ದೂರುದಾರರು ನಮ್ಮ ಕಛೇರಿಯಲ್ಲಿ ಮಾತ್ರ ವಲ್ಲದೆ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಹ ದೂರು ಕೊಟ್ಟಿದ್ದಾರೆ ಮತ್ತು ಅವರಿಂದ ನಿರ್ದೇಶನವನ್ನು ಸಹ ಪಡೆದಿದ್ದಾರೆ. ದೂರುದಾರರು ಹೇಳುತ್ತಿರುವುದೇನೆಂದರೆ ಅವರ ಮನೆಯ ಹಿಂದಿನ ರಸ್ತೆಯನ್ನು ಪುಟ್ಟಸ್ವಾಮಿ ಮತ್ತು ಇತರರು ಒತ್ತುವರಿ ಮಾಡಿಕೊಂಡು ಅದರ ಮೇಲೆ ತಿಪ್ಪೆ ಹಾಕಿ ಕಳ್ಳಿ ಬೇಲಿಯನ್ನು ಬೆಳೆಸಿದ್ದಾರೆ. ಇದೇ ವಿಷಯವಾಗಿ ದೂರುದಾರರ ಮೇಲೂ ಸಹ ಪುಟ್ಟಸ್ವಾಮಿ ಗೌಡ ದೂರು ಕೊಟ್ಟಿದ್ದಾರೆಂದು ಎದುರುದಾರರು ಹೇಳುತ್ತಾರೆ. ಕರ್ನಾಟಕ ಪಂಚಾಯ್ತಿ ಅಧಿನಿಯಮದ ಕಲಂ 72ರಲ್ಲಿ ಖಾಲಿ ಸ್ಥಳಗಳ ಮೇಲೆ ಮತ್ತು ಸಾರ್ವಜನಿಕ ಓಣಿಗಳ ಮೇಲೆ ಯಾವುದಾದರು ಅತಿಕ್ರಮಣವಾದರೆ ಏನು ಕ್ರಮ ಕೈಗೊಳ್ಳಬೇಕು ಎನ್ನುವುದನ್ನು ವಿವರಿಸಲಾಗಿದೆ. ಖಾಸಗಿ ಜಾಗಗಳಿಗೆ ಕಲಂ 72 ಅನ್ವಯಿಸುವುದಿಲ್ಲ 100ರೂಗಳ ವರೆಗೆ ಈ ಅಪರಾಧಕ್ಕಾಗಿ ದಂಡ ವಿಧಿಸಬಹುದು ಮತ್ತು ಪ್ರತಿ ದಿವಸ 5 ರೂಗಳಂತೆ ದಂಡ ವಿಧಿಸುತ್ತಾ ಇರಬಹುದು ಅಂತ ವಿಧಿಸಲಾಗಿದೆ. ಇದಲ್ಲದೆ ರಸ್ತೆಗಳ ಮೇಲೆ ಧನಕರುಗಳನ್ನು ಕಟ್ಟುವುದು ಅಥವಾ ಹೊಲಸು ಮಾಡುವುದು ಚರಂಡಿಗಳಲ್ಲಿ ಹೊಲಸು

ನೀರನ್ನು ಬಿಡುವುದು ಇಂತಹ ಸಂದರ್ಭಗಳಲ್ಲಿ ಕಲಂ 75ರಡಿಯಲ್ಲಿ ಪಂಚಾಯ್ತಿಯು ಕ್ರಮ ಕೈಗೊಳ್ಳಬೇಕಾಗುತ್ತದೆ. ನೋಟೀಸಿನಲ್ಲಿ ತಿಳಿಸಿರುವ ಅವಧಿಯ ಒಳಗೆ ನೋಟೀಸು ಪಡೆದವರು ಅದರಂತೆ ನಡೆದುಕೊಳ್ಳದಿದ್ದರೆ ಪಂಚಾಯ್ತಿಯೇ ಆ ಕೆಲಸವನ್ನು ಮಾಡಿ ಅಂತಹ ಮನೆಗಳ ಮಾಲೀಕರಿಂದ ಇಲ್ಲವೆ ಬಾಡಿಗೆದಾರರಿಂದ ಖರ್ಚಾದ ಹಣ ವಸೂಲಿ ಮಾಡಬೇಕು ಮತ್ತು ದಂಡವನ್ನು ವಿಧಿಸಬೇಕು ಈ ಕರ್ತವ್ಯವನ್ನು ದೂರುದಾರರ ಮೇಲೆ ದೂರು ಬಂದರೂ ಸಹ ಪಂಚಾಯ್ತಿಯು ಪಾಲಿಸತಕ್ಕದ್ದಾಗಿದೆ ಆದರೆ ಎದುರುದಾರರು ಕಲಂ 72 ಮತ್ತು 75 ಕರ್ನಾಟಕ ಪಂಚಾಯ್ತಿ ರಾಜ್ ಅಧಿನಿಯಮದಡಿಯಲ್ಲಿ ಯಾವುದೇ ಕ್ರಮ ತೆಗೆದುಕೊಳ್ಳದೆ ಕೇವಲ ನೋಟೀಸನ್ನು ಮಾತ್ರ ಕೊಟ್ಟಿದ್ದಾರೆ. ಆದ್ದರಿಂದ ಎದುರುದಾರರು ಕರ್ತವ್ಯ ನಿರ್ಲಕ್ಷ್ಯತನ ತೋರಿದ್ದಾರೆಂದು ಹೇಳಲು ಸಾಕಷ್ಟು ಆಧಾರಗಳಿವೆ.

6. ಕರ್ನಾಟಕ ಪಂಚಾಯ್ತಿ ರಾಜ್ ಕಲಂ 72 ಮತ್ತು 75ರ ಅಡಿಯಲ್ಲಿ ಪಿ.ಡಿ.ಓ., ರವರು ಸೂಕ್ತ ಕ್ರಮಗಳನ್ನು ತೆಗೆದುಕೊಂಡು ಸಾರ್ವಜನಿಕ ಓಣಿಗಳ ಮೇಲೆ ಆಗಿರುವ ಅತಿಕ್ರಮಣವನ್ನು ತೆಗೆಸಿ ಹಾಕುವಂತೆ ರಸ್ತೆಯ ಮೇಲೆ ದನಕರುಗಳನ್ನು ಕಟ್ಟಿದ್ದಲ್ಲಿ ಕಲಂ 75ರನ್ವಯ ಕರ್ನಾಟಕ ಪಂಚಾಯ್ತಿ ರಾಜ್ ಅದಿನಿಯಮದಡಿಯಲ್ಲಿ ಕ್ರಮ ತೆಗೆದುಕೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರಿಗೆ ನಿರ್ದೇಶನ ನೀಡಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.